


# ಕ್ರಾಂತಿ ಬೇಡ; ವಿಕಸನ ಇರಲಿ

'ಅನಾಥನಿಗೆ ಒಂದು ತುಂಡು ರೊಟ್ಟಿ ಒದಗಿಸಲಾಗದ ಅಥವಾ ವಿಧವೆಯ ಕಣ್ಣೀರನ್ನು ಒರೆಸಲಾಗದ ದೇವರನ್ನಾಗಲೀ, ಧರ್ಮವನ್ನಾಗಲೀ ನಾನು ನಂಬುವುದಿಲ್ಲ'– ಸ್ವಾಮಿ ವಿವೇಕಾನಂದರು ಒಮ್ಮೆ ಹೀಗೆ ಹೇಳಿದ್ದರು. 'ಅರ್ಧ ರೊಟ್ಟಿ ಲಭ್ಯವಾಗುವುದು ರೊಟ್ಟಿಯೇ ಇಲ್ಲದಿರುವುದಕ್ಕಿಂತ ಉತ್ತಮ' ಎಂದು ಮತ್ತೊಂದು ಸಂದರ್ಭದಲ್ಲಿ ಹೇಳಿದ್ದರು. ಸ್ವಾಮೀಜಿಗೆ ಜನಸಾಮಾನ್ಯರ ಬಗೆಗಿದ್ದ ಕಾಳಜಿ, ಅತ್ಯಂತ ಪ್ರಾಯೋಗಿಕವಾದ ಮತ್ತು ದೇವರನ್ನು ಅರಿಯಲು ಪ್ರೇರೇಪಿಸಬಲ್ಲ ಧರ್ಮದ ಬಗೆಗಿನ ಅವರ ಕಾಣ್ಕೆಗೆ ಈ ಹೇಳಿಕೆಗಳು ಕನ್ನಡಿ ಹಿಡಿಯುತ್ತವೆ. ಜತೆಗೆ ಅವರ ವ್ಯಕ್ತಿತ್ವದ ಸಾಮಾಜಿಕ ಆಯಾಮವನ್ನೂ ಇವು ತೋರಿಸುತ್ತವೆ.

ನಮ್ಮ ಭಾರತೀಯ ಸಮಾಜದಲ್ಲಿ ಬೇರುಬಿಟ್ಟಿದ್ದ ಅಸಮಾನತೆಗಳನ್ನು ಕಂಡು ಸ್ವಾಮೀಜಿ ತೀವ್ರ ತಳಮಳಗೊಂಡಿದ್ದರು. ಶ್ರೀಮಂತರು ಹಾಗೂ ಬಡವರ ನಡುವಿನ ಅಂತರ ನಿವಾರಿಸಲಾಗದು ಎಂಬ ವಾದವನ್ನು ಒಪ್ಪಲು ಅವರು ಎಂದಿಗೂ ಸಿದ್ಧವಿರಲಿಲ್ಲ.

ಇಂದಿನ ಭಾರತ ಕೂಡ ಅಂದಿನ ಭಾರತಕ್ಕಿಂತ ಹೆಚ್ಚು ಭಿನ್ನವೇನೂ ಅಲ್ಲ. ರಾಷ್ಟ್ರದ ಒಟ್ಟಾರೆ ಸಂಪತ್ತಿನ ಶೇ 85ರಷ್ಟನ್ನು ಇಂದು ಶೇ 20ರಷ್ಟು ಮೇಲ್‌ಸ್ತರದ ಜನ ಸೃಷ್ಟಿಸುತ್ತಾ, ಅದರ ಮೇಲೆ ನಿಯಂತ್ರಣ ಹೊಂದಿದ್ದಾರೆ. ಆದರೆ, ಕೆಳಸ್ತರದ ಶೇ 20ರಷ್ಟು ಜನ ರಾಷ್ಟ್ರದ ಸಂಪತ್ತಿನ ಶೇ 1.5ರಷ್ಟನ್ನು ಮಾತ್ರ ಸೃಷ್ಟಿಸುತ್ತಿದ್ದು, ಅವರು ಹೊಂದಿರುವ ನಿಯಂತ್ರಣ ಕೂಡ ಅಷ್ಟಕ್ಕೇ ಸೀಮಿತವಾಗಿದೆ. ಹೀಗೆ ಕಣ್ಣಿಗೆ ರಾಚುವಂತಹ ಅಸಮಾನತೆಗೆ ಕಡಿವಾಣ ಹಾಕಲು ಸರ್ಕಾರ ಅಥವಾ ಸಮಾಜ ಏನನ್ನು ಮಾಡಬಹುದು? ಹೆಚ್ಚೆಚ್ಚು ದಾನ, ದೇಣಿಗೆಗಳನ್ನು ನೀಡುವುದೇ ಇದಕ್ಕೆ ಪರಿಹಾರವೇ ಅಥವಾ ಇದನ್ನು ನಾವು ಇನ್ನೂ ಆಳವಾಗಿ ನೋಡಿ, ಸಮಾನತೆ ಸಾಧಿಸುವ ನಿಟ್ಟಿನಲ್ಲಿ ಜನಸಾಮಾನ್ಯರ ಸಬಲೀಕರಣದ ಮಾರ್ಗೋಪಾಯಗಳ ಬಗ್ಗೆ ಹೆಚ್ಚಿನ ಶೋಧ ನಡೆಸಬೇಕೇ?– ಎಂಬ ಪ್ರಶ್ನೆಗಳು ಮೂಡುತ್ತವೆ.

ಆರ್ಥಿಕ ದುರ್ಬಲರು ಹಾಗೂ ಅಮಾಯಕರನ್ನು, ಬರೀ ಹಣಕಾಸು ನೆರವು ನೀಡುವ ಮೂಲಕ ಏಳ್ಗೆಯ ಪಥಕ್ಕೆ ತರಬಾರದು; ಅವರನ್ನು ಸಬಲೀಕರಣಗೊಳಿಸಿ ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳಲು ಸಮರ್ಥರಾಗುವಂತೆ ಮಾಡಬೇಕು ಎಂಬುದು ಸ್ವಾಮೀಜಿಯವರ ದೃಢವಾದ ಪ್ರತಿಪಾದನೆಯಾಗಿತ್ತು. ಬಡವರ ಸ್ವಾಭಿಮಾನ ಹಾಗೂ ಘನತೆಗೆ ಘಾಸಿಯಾಗದಂತೆ, ತಾವೇ ಮೇಲಕ್ಕೆ ಬರಲು ಒತ್ತಾಸೆಯಾಗುವಂತಹ ಸನ್ನಿವೇಶವನ್ನಷ್ಟೇ ಉಳ್ಳವರು ಸೃಷ್ಟಿಸಿದರೆ ಸಾಕು ಎಂಬುದು ಅವರ ಬಯಕೆಯಾಗಿತ್ತು.

ವಿವೇಕಾನಂದರನ್ನು ಕಾಡಿದ್ದು ಆರ್ಥಿಕ ಅಸಮಾನತೆಗಳು ಮಾತ್ರವಲ್ಲ; ಆಗಿನ ಸಾಮಾಜಿಕ ತಾರತಮ್ಯಗಳನ್ನು ನೋಡಿಯೂ ಅವರು ತೀವ್ರವಾಗಿ ನೊಂದಿದ್ದರು. ಜನಸಮೂಹವನ್ನು ನಿರ್ಲಕ್ಷಿಸುವುದೆಂದರೆ ಮಹಾನ್ ರಾಷ್ಟ್ರವಂಚನೆ; ಇದು ರಾಷ್ಟ್ರದ ಹಿನ್ನಡೆಗೆ ಕಾರಣ ಎಂದೇ ಅವರು ಭಾವಿಸಿದ್ದರು. ಜನಸಮೂಹ ಹೆಚ್ಚು ಸುಶಿಕ್ಷಿತವಾಗಬೇಕು, ಅವರಿಗೆ ಉತ್ತಮ ಆಹಾರ ಲಭ್ಯವಾಗಬೇಕು ಹಾಗೂ ಅವರೆಡೆಗೆ ಕಾಳಜಿ ವ್ಯಕ್ತವಾಗಬೇಕು ಎಂಬುದು ಅವರ ಇಚ್ಛೆಯಾಗಿತ್ತು. 'ರಾಷ್ಟ್ರದ ಪುನಶ್ಚೇತನವಾಗಬೇಕಾದರೆ ನಾವು ಜನಸಮೂಹದ ಏಳ್ಗೆಗಾಗಿ ಕೆಲಸ ಮಾಡಬೇಕು' ಎಂದು ಅವರು ಹೇಳುತ್ತಿದ್ದರು.

ಆರ್ಥಿಕ ಸಮಾನತೆ ಸಾಧಿಸುವುದೆಂದರೆ ಶ್ರೀಮಂತರ ಸಂಪತ್ತನ್ನು ಕಸಿದುಕೊಳ್ಳಬೇಕು ಎಂಬುದು ಸ್ವಾಮೀಜಿಯವರ ನಿಲುವು ಆಗಿರಲಿಲ್ಲ. ಇದಕ್ಕೆ ಬದಲಾಗಿ, ಬಡವರು ಮೇಲಕ್ಕೇರುವ ಮೂಲಕ ಸಮಾನತೆ ಮನೆ ಮಾಡಬೇಕು ಎಂಬ ನಿಲುವು ಅವರದಾಗಿತ್ತು. ನಮ್ಮ ರಾಷ್ಟ್ರದ ಇಂದಿನ ಪರಿಸ್ಥಿತಿಯಲ್ಲಿ ಈ ಧೋರಣೆ ಅತ್ಯಂತ ಅಗತ್ಯ. ಪ್ರಸ್ತುತ, ದೇಶದ 200ಕ್ಕೂ ಹೆಚ್ಚು ಜಿಲ್ಲೆಗಳು ಹಿಂಸೆಯಿಂದ ಬಾಧಿತವಾಗಿದ್ದು, ಬಂದೂಕಿನ ನಳಿಕೆಯಿಂದ ಸಾಮಾಜಿಕ ಸಮಾನತೆ ಸ್ಥಾಪಿಸಬೇಕೆಂಬ ಸಿದ್ಧಾಂತವನ್ನು ಜನ ಒಪ್ಪಿಕೊಳ್ಳತೊಡಗಿದ್ದಾರೆ.

ನಮ್ಮ ರಾಷ್ಟ್ರದಲ್ಲಿ ಸಾಮಾಜಿಕ ಅಭ್ಯುದಯವು ಕ್ರಾಂತಿಯ ಫಲಶ್ರುತಿಯಾಗಿ ಹೊರಹೊಮ್ಮಬಾರದು; ಬದಲಿಗೆ ಅದು ವಿಕಸನದ ಪ್ರಕ್ರಿಯೆಯಾಗಿ ಒಡಮೂಡಬೇಕು ಎಂದು ವಿವೇಕಾನಂದರು ಪದೇಪದೇ ಹೇಳುತ್ತಿದ್ದರು. ಅವರ ದೂರದೃಷ್ಟಿ ಅದೆಂತಹುದಾಗಿತ್ತು? ಅಸಮಾನತೆಗಳನ್ನು ಜನ ದೀರ್ಘಕಾಲ ಸಹಿಸಿಕೊಂಡು ಕೈಕಟ್ಟಿ ಕೂರುವುದಿಲ್ಲ ಎಂಬುದನ್ನು ಅವರು ಆಗಲೇ ಮನಗಂಡಿದ್ದರು. ಇದೇ ಪರಿಸ್ಥಿತಿ ಮುಂದುವರಿದರೆ, ಅವಕಾಶ ವಂಚಿತರು ದಂಗೆಯೆದ್ದು, ಈ ಸಮಸ್ಯೆಯನ್ನು ಪರಿಹರಿಸಲು ವೈಜ್ಞಾನಿಕ ಮಾರ್ಗ ಹಿಡಿಯುವ ಬದಲು ಭಾವುಕ ಮಾರ್ಗ ಹಿಡಿಯುತ್ತಾರೆ ಎಂಬುದು ಅವರಿಗೆ ಗೊತ್ತಿತ್ತು. ಹತಾಶ ಜನಸಮೂಹವನ್ನು ವಿಧ್ವಂಸಕ ಹಿಂಸಾಕೃತ್ಯ ಎಸಗುವಂತೆ ಸುಲಭವಾಗಿ ಪ್ರಲೋಭನೆ ಮಾಡಬಹುದೆಂಬ ಅರಿವೂ ಅವರಿಗೆ ಇತ್ತು. ಆರ್ಥಿಕ ಅಭ್ಯುದಯದ ಸವಲತ್ತುಗಳು ಸಮಾಜದ ಕಟ್ಟಕಡೆಯ ಮನುಷ್ಯನನ್ನು ತಲುಪದಿದ್ದರೆ ರಾಷ್ಟ್ರವು ವಾಸ್ತವವಾಗಿ ಬೆಳವಣಿಗೆ ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ಅವರು ಗ್ರಹಿಸಿದ್ದರು. ದಾನ, ದೇಣಿಗೆ, ಕೊಡುಗೆಗಳು ಮನುಷ್ಯನ ಸಾಹಸ ಗುಣ ಹಾಗೂ ಕ್ರಿಯಾಶೀಲತೆಯನ್ನೇ ನಾಶ ಮಾಡಬಹುದೆಂಬುದನ್ನು ಅವರು ಮನವರಿಕೆ ಮಾಡಿಕೊಂಡಿದ್ದರು.

ಇಂತಹ ನೆರವು ಅಸಮಾನತೆ ಹೋಗಲಾಡಿಸುವ ಸುಸ್ಥಿರವಾದ ಹಾಗೂ ಶಾಶ್ವತ ಮಾರ್ಗೋಪಾಯವಾಗದು; ಹೀಗಾಗಿಯೇ ಅವಕಾಶ ವಂಚಿತರನ್ನು ಅವರ ಘನತೆ, ಸ್ವಾಭಿಮಾನಕ್ಕೆ ಧಕ್ಕೆಯಾಗದಂತೆ ಸೇವೆ ಮಾಡಲು ಅವಕಾಶ ಕಲ್ಪಿಸುವಂಥದ್ದೇ ಧರ್ಮ ಎಂದು ಅವರು ಸಾರುತ್ತಿದ್ದರು. ಹೀಗೆ ನೀಡುವ ನೆರವು ಜೀವ ಪೋಷಕ ಹಾಗೂ ಜೀವಾಧಾರಕವಾಗಬೇಕು ಎಂಬುದು ಅವರ ಖಚಿತ ನಿಲುವಾಗಿತ್ತು.

ಸರ್ಕಾರದ ಔದಾರ್ಯ ಅಥವಾ ದಾನ, ದೇಣಿಗೆಗಳನ್ನು ಅವಲಂಬಿಸದ ಸಮಾಜ ನಿರ್ಮಾಣವಾಗಬೇಕು ಎಂಬುದು ಸ್ವಾಮೀಜಿಯ ಆಶಯವಾಗಿತ್ತು. ಈ ಪ್ರಾಯೋಗಿಕವಾದ ಹಾಗೂ ಅಹಿಂಸಾತ್ಮಕವಾದ ವಿಧಾನವು ಸಿರಿವಂತರಲ್ಲಿ ಅಭದ್ರತೆಯನ್ನೂ ಮೂಡಿಸದು, ಆರ್ಥಿಕ ಬೆಳವಣಿಗೆ ಸಾಧಿಸುವ ಅಪೇಕ್ಷೆ ಉಳ್ಳವರಲ್ಲಿ ಕೀಳರಿಮೆಯನ್ನೂ ಬೆಳೆಸದು ಎಂದು ಅವರು ಹೇಳುತ್ತಿದ್ದರು.

ಹೀಗೆ ಸ್ವಾಮಿ ವಿವೇಕಾನಂದರಂತೆ ಚಿಂತಿಸಿ, ಕಾರ್ಯಶೀಲರಾಗುವಂತಹ ನಾಯಕರು ಹಾಗೂ ಯೋಜನಾ ನಿರೂಪಕರು ಇಂದು ರಾಷ್ಟ್ರಕ್ಕೆ ಬೇಕಾಗಿದೆ. ಇಲ್ಲದಿದ್ದರೆ ನಾವು ಇಂದು ನೋಡುತ್ತಿರುವ ಕ್ಷಿಪ್ರ ಆರ್ಥಿಕ ಬೆಳವಣಿಗೆಯು ಭವಿಷ್ಯದಲ್ಲಿ ಕೂಡ ಕೆಲವೇ ಜನರ ಸ್ವತ್ತಾಗಿ ಮುಂದುವರಿಯಲಿದೆ. 'ಧನಿಕರಲ್ಲಿರುವ ಸಂಪತ್ತನ್ನು ಹಿಂಸೆಯ ಮೂಲಕ ಕಸಿಯುವುದೊಂದೇ ಬಡವರಿಗೆ ಅದನ್ನು ತಲುಪಿಸಲು ಇರುವ ಮಾರ್ಗ' ಎಂಬ ಸಿದ್ಧಾಂತವನ್ನು ಬಲವಾಗಿ ನಂಬಿದವರಿಗೆ ಇನ್ನಷ್ಟು ಬಲ ತುಂಬುತ್ತದೆ ಅಷ್ಟೇ.

◆